doc-5/8
T·P-2

RegNo M 1299 - 42nd Year - Sri 'Satyavadi' Mysore - 21-1-1958

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ಕ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet, Mysore

ಸತ್ಯವಾದಿ

ಸ್ಥಾಪಕರು– ಅಂಮನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯರು [ಬಿಡಿಪ್ರತಿ 3 ಸೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1-80

ಮಂಗಳಾ ಜಲಾಶಯ ಬಗೆ ವಿಶ್ವಸಂಸ್ಥೆಗೆ ಭಾರತದ ಪ್ರತಿಭಟನೆ

ಸಹಾಯರೂಪದಲ್ಲಿ ಕೊಟ್ಟಿರುವ ಹಣ

ನವದೆಹಲಿ 20— 56-57 ರಲ್ಲಿ ಪರಿಶಿಷ್ಟ ವರ್ಗದವರ ಹಿತರಕ್ಷಣೆಗಾಗಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಕ್ಕೊಳಪಟ್ಟಿರುವ ಕ್ಷೇತ್ರಗಳಿಗೆ ಸುಮಾರು 187 ಲಕ್ಷ ರೂಗಳ ಹಣವನ್ನು ಸಹಾಯ ಧನ ರೂಪದಲ್ಲಿ ನೀಡಲಾಗಿದೆ.

ಕರಾಚಿಯಲ್ಲಿ ಸಭೆ

ನವದೆಹಲಿ 20— ಭಾರತ-ಪಾಕಿಸ್ತಾನ ಚರಿತ್ರೆ ಒಪ್ಪಂದದ ಕಾರ್ಯಾನು ಷ್ಠಾನ ಸಮಿತಿ ಸಭೆಯು ಜನವರಿ 22 ಮತ್ತು 23 ರಂದು ಕರಾಚಿಯಲ್ಲಿ ನಡೆಯುವುದು

ಮರಣಾನಂತರ ಅಶೋಕಚಕ್ರ ಪ್ರಶಸ್ತಿ

ನವದೆಹಲಿ 20— ನಾಗಾ ಪರ್ವತ ಪ್ರದೇಶದಲ್ಲಿ ಅಪ್ರತಿಮ ರೀತಿಯಲ್ಲಿ ಎದೆ ಗಾರಿಕೆ ತೋರಿಸಿದ ಭೂಸೇನೆಯ ಇಬ್ಬರು ಅಧಿಕಾರಿಗಳು ಮತ್ತು ಒಬ್ಬ ಹವಿಲ್ದಾರರಿಗೆ ಅವರು ಮರಣಾನಂತರ ಪ್ರಥಮ ದರ್ಜೆಯ ಅಶೋಕ ಚಕ್ರ ಪ್ರಶಸ್ತಿ ಲಭಿಸಿದೆ

ಗಣರಾಜ್ಯೋತ್ಸವ

ಮೈಸೂರು 20— ಮೈಸೂರು ಪೌರ ಸಭೆಯು ಪ್ರಜಾರಾಜ್ಯ ದಿನೋತ್ಸವವನ್ನು ತಾ || 26 ರಂದು ಟೌನ್ ಹಾಲ್ ಮೈದಾನದಲ್ಲಿ ನೆರವೇರಿಸಲು ಏರ್ಪಡಿಸಿರುವುದೆಂದು ಮುನಿಸಿಪಲ್ ಕಮಿಷನರು ತಿಳಿಸಿರುತ್ತಾರೆ

ನಾಳೆಯ ಪಂಚಾಂಗ

ಆ || ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ
22 ತೃತೀಯ ಧನಿಷ್ಠ

ಜೀವಕ್ಕೆ ಅಪಾಯ ಪ್ರವೇಶವಿಲ್ಲ

ಪುಟ್ಟಿ 18— 'ಈ ಡಜ' ಗ್ರಾಮದಲ್ಲಿ ಒಬ್ಬ 4 ವರ್ಷದ ಹುಡುಗಿಗೆ ರೇಡಿಯಂ ಔಷಧೋಪಚಾರ ನಡೆಸಲ್ಪಟ್ಟಿದ್ದಿತು ; ಈಗ ಅವಳು ವಿಪರೀತ ರೇಡಿಯೋ ಆಕ್ಟಿವ್ ಆಗಿ, ತನ್ನ ಮನೆ ಮತ್ತು ತೋಟದಲ್ಲೆಲ್ಲಾ ರೇಡಿಯೋ ಆಕ್ಟಿವಿಟಿ ಹರಡಿದೆ ; ಮನೆ ಸುತ್ತ ಮುಳ್ಳುತಂತಿ ಬೇಲಿ ಹಾಕಿ, ಪೋಲೀಸರು ಕಾವಲಿದ್ದಾರೆ ; ಜನರು ಹೋಗದಿರಲೆಂದು ' ಜೀವಕ್ಕೆ ಅಪಾಯ, ಪ್ರವೇಶವಿಲ್ಲ ' ಎಂದು ದೊಡ್ಡ ನೋಟೀಸು ಅಂಟಿಸಲಾಗಿದೆ !

ಭಾಷಾ ಸಮಸ್ಯೆ ಬಗ್ಗೆ

ಜ್ಯೋತಿಷ್ಯರ್ತದಲ್ಲಿ ಭಾಷಾ ಸಮಸ್ಯೆ ಬಗ್ಗೆ ಚರ್ಚೆ ಬಹು ಜೋರಾಗಿದ್ದಿತು ; ಹಿಂದೀ ಭಾಷೆಯ ಪ್ರಬಲ ಪ್ರತಿವಾದಕರಾದ ಭಾರತದ ವಾಣಿಜ್ಯ ಮಂತ್ರಿ ಮುರಾರ್ಜಿ ದೇಸಾಯರು ' ನಾನು ಹೇಳುವುದೂ ದಕ್ಷಿಣದ ಪ್ರತಿನಿಧಿಗಳಿಗೂ ಮನದಟ್ಟಾಗುವುದಕ್ಕಾಗಿ ನಾನು ಇಂಗ್ಲೀಷಿನಲ್ಲಿ ಮಾತಾಡುತ್ತೇನೆ ' ಎಂದು ಹೇಳಿದರು — ಭಾಷಾ ಚರ್ಚೆಯಲ್ಲಿ ಭಾಗವಹಿಸಿದ್ದ 17 ಮಂದಿ ಪೈಕಿ 9 ಮಂದಿ ಇಂಗ್ಲೀಷಿನಲ್ಲಿಯೂ, 6 ಮಂದಿ ಹಿಂದಿಯಲ್ಲೂ, ಒಬ್ಬರು ಉರ್ದುವಿನಲ್ಲೂ, ಪಂ|| ನೆಹರೂರವರು ಹಿಂದಿ ಮತ್ತು ಇಂಗ್ಲೀಷಿನಲ್ಲೂ ಮಾತನಾಡಿದರು

ಪಾಕಿಸ್ತಾನವು ಬಾಗ್ದಾದ್ ಒಪ್ಪಂದಕ್ಕಿಂತಲೂ ಸೀಟೋ ಸಂಸ್ಥೆಯಿಂದ ಹೊಂದಿರುವುದರಿಂದ ಕಾಶ್ಮೀರ ಬಗ್ಗೆ ಭಾರತ-ಪಾಕಿಸ್ತಾನಗಳ ನಡುವೆ ಕಲಹ ಪರಿಹಾರವಾಗಲು ಅನುಕೂಲವಾಗುವುದೆಂದು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಸೂಚಿಸಿದೆ.

ಕಮ್ಯುನಿಸ್ಟ ಅಧ್ಯಕ್ಷ

ಅಹಮದಾಬಾದು ಜಿಲ್ಲೆಯ ಸ್ಥಳೀಯ ಸಂಸ್ಥೆಗೆ ಕಮ್ಯುನಿಸ್ಟರಾದ ಶ್ರೀ ಅನಂತರಾವ್ ಶಂಕರರಾವ್ ಜಾಧೋರವರು ಪ್ರೆಸಿಡೆಂಟರಾಗಿಯೂ, ಪಿಎಸ್ಪಿಯವರಾದ ಶ್ರೀ ಅಮೃತ್ ರಾಮಚಂದ್ರ ಮೆಹತಾರವರು ವೈಸ್ ಪ್ರೆಸಿಡೆಂಟರಾಗಿಯೂ ಆಯ್ಕೆ ಆದರು ಈ ಹೊಸ ಸಮಿತಿಯಲ್ಲಿ 42 ಮಂದಿ ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು 14 ಕಾಂಗ್ರೆಸಿಗರು ಮತ್ತು 4 ಮಂದಿ ಸ್ವತಂತ್ರರೂ ಇರುವರು.

ಚಂದ್ರಗ್ರಹಕ್ಕೆ ಮಾನವ

ಸೋವಿಯೆಟ್ ಪ್ರೊಫೆಸರೊಬ್ಬರು ರಷಿಯನ್ನರು ಸಾವಿರಗಟ್ಟಲೆ ಉಪಗ್ರಹಗಳನ್ನು ಬಿಡಲಿರುವರೆಂದು ಹೇಳಿರುವದಾಗಿ ಇಟಲಿಯ ಕಮ್ಯುನಿಸ್ಟ ಪತ್ರಿಕೆಯು ನಿಟಾ ಪ್ರಕಟಿಸಿದೆ ಮುಂದಿನ ವರ್ಷ ರಾಕೆಟ್ಟುಗಳನ್ನು ಚಂದ್ರಗ್ರಹಕ್ಕೆ ಕಳುಹಿಸಲಿರುವರೆಂದೂ, 1960 ರ ಹೊತ್ತಿಗೆ ಚಂದ್ರ, ಬುಧ ಅಥವಾ ಶುಕ್ರ ಗ್ರಹಗಳ ಮೇಲೆ ಜೀವಿತವಿದೆಯೇ ಎಂಬುದು ಖಂಡಿತವಾಗಿ ತಿಳಿಯಲ್ಪಡಬಹುದೆಂದೂ ಪ್ರಕಟಿಸಿದೆ.

ಕರಾಚಿ 19— ಯುದ್ಧಸ್ತಂಭ ರೇಖೆಯು ಎರಡು ಕಡೆಗಳಿಂದಲೂ ಸೈನ್ಯಗಳನ್ನು ಹೊರತೆಗೆಯುವಂತೆ ಮಾಡಲು ಪ್ರಯತ್ನಿಸಬೇಕೆಂದು ವಿಶ್ವಸಂಸ್ಥೆ ಪ್ರತಿನಿಧಿ ಗ್ರಹಾಂರಿಗೆ ಪಾಕಿಸ್ತಾನ ತಿಳಿಸಿರುವುದಾಗಿ ವರದಿಯಾಗಿದೆ

ಂ ಂ

ಸ್ಟಾಕ್‌ಹೋಮ್ 18— ಬ್ರಿಟನ್ನಿನಲ್ಲಿ ನಾಟೋ ಏವಾನ ರಕ್ಷಣೆಯನ್ನು ಭದ್ರಗೊಳಿಸಲು ಆರ್ ಎ ಎಫ್ ಸ್ಟೇಷನ್ನಿಗೆ ಅಮೇರಿಕಾದ 8 ಆಟಂಬಾಂಬರ್‌ಗಳು ಹಾರಿದವು.

ನವ ದೆಹಲಿ 20 — (ಆಜಾದ್) ಕಾಶ್ಮೀರ ಆಕ್ರಮಣ ಪ್ರದೇಶದಲ್ಲಿ ಮಂಗಳಾ ಜಲಾಶಯ ನಿರ್ಮಾಣದ ಬಗ್ಗೆ ಬ್ರಿಟ್ ಮತ್ತು ಅಮೇರಿಕಾಗಳ ಸಂಸ್ಥೆಗಳ ಸಂಗಡ ಪಾಕಿಸ್ತಾನ ಒಪ್ಪಂದ ಮಾಡಿಕೊಂಡಿರುವ ಬಗ್ಗೆ ಭಾರತ ವಿಶ್ವಸಂಸ್ಥೆಗೆ ಮತ್ತೊಂದು ಪ್ರತಿಭಟನೆ ಸಲ್ಲಿಸಿದೆ.

ಮೈಸೂರು 21 — ಮೈಸೂರು ಪೌರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷತೆಗೆ ಶ್ರೀ ಬಿ. ನಾರಾಯಣ ಸ್ವಾಮಿ ಮತ್ತು ಶ್ರೀ ಡಿ. ಲಿಂಗಯ್ಯನವರು ಕಾಂಗ್ರೆಸು ಪಕ್ಷದ ಪರವಾಗಿ ಕ್ರಮವಾಗಿ ಸ್ಪರ್ಧಿಸುವರೆಂದು ಗೊತ್ತಾಗಿದೆ.

ಮದ್ರಾಸು 20 — ಮದ್ರಾಸು ಗವರ್ನರಾಗಿ ಶ್ರೀ ಬಿಷ್ಣುರಾಂ ಮೇಧ 24 ನೇ ತಾ|| ಪ್ರಮಾಣವಚನ ಸ್ವೀಕರಿಸುವರು.

9 ವರ್ಷದ ಹುಡುಗಿಯ ಸಾವು

ಬೆಂಗಳೂರು 19 — ಪೋಲೀಸು ವರದಿಗಳ ಪ್ರಕಾರ ತ್ಯಾಗರಾಯ ನಗರದ ನಿವಾಸಿ ಲಿಂಗಯ್ಯ ಎಂಬವನು ತನ್ನ 9 ವರ್ಷದ ಮಗಳು ಜಯಮ್ಮ, 4 ವರ್ಷದ ಮಗ ವೆಂಕಟೇಶ ಮತ್ತು ತನ್ನ ರಖಾವದಾರಳೊಡನೆ ಇದ್ದನು ಮಕ್ಕಳ ತಾಯಿ ಪ್ರತ್ಯೇಕವಾಗಿದ್ದಳು ಕಳೆದ ಶುಕ್ರವಾರ ಜಯಲಕ್ಷ್ಮಿ ಎರಡು ಬಾರಿ ಬಟ್ಟೆ ಕೊಳೆ ಮಾಡಿಕೊಂಡಳು ಮೊದಲನೆ ಬಾರಿ ತಂದೆ ಬೈದನು. ಎರಡನೆ ಸಲ ಕಡ್ಡಿಯಿಂದ ಹೊಡೆದನು ಅವಳು ಶುಸಿಡಳು ಅನಂತರ ಎದೆನೋವೆಂದು ತಕ್ಷಳು ಲಿಂಗಯ್ಯ ಪೋಲೀಸು ವಶದಲ್ಲಿರುವನು.

× ಕಾಶ್ಮೀರ ವಿಧಾನ ಸಭೆಯ 32 ಶಿಡ ಸದ್ಯರು ಪ್ರಧಾನಿ ಗುಲಾಂ ಭಕ್ಷ್ಮಿಯವರಿಗೆ ಬೆಂಬಲಿಸಿದ್ದಾರೆ

ವಾರ್ತಾ ಇಲಾಖೆಯ ಅಭಿವೃದ್ಧಿ ಮಾಡುವೆ

ಸತ್ಕಾರಕೂಟದಲ್ಲಿ ವಾರ್ತಾ ಇಲಾಖೆ ಮುಖ್ಯಾಧಿಕಾರಿಯವರಾದ ಶ್ರೀ ಡಿ. ಆರ್. ರಾಮಯ್ಯನವರ ಹೇಳಿಕೆ

ಮೈಸೂರು ರಾಜ್ಯ ಸರ್ಕಾರದ ವಾರ್ತಾ ಇಲಾಖೆ ಮುಖ್ಯಾಧಿಕಾರಿಗಳಾದ ಶ್ರೀ ಡಿ. ಆರ್. ರಾಮಯ್ಯ, ಬಿ. ಎ ಇವರ ಗೌರವಾರ್ಥವಾಗಿ ನಿನ್ನೆ ಮಧ್ಯಾಹ್ನ ದಾಸಪ್ರಕಾಶ'ನಲ್ಲಿ ಮೈಸೂರು ನಗರ ಪತ್ರಿಕೋದ್ಯೋಗಿಗಳ ಸಂಘ ಸತ್ಕಾರ ಕೂಟ ಏರ್ಪಡಿಸಿತ್ತು.

ಸತ್ಕಾರಕೂಟಕ್ಕೆ ಮೈಸೂರು ನಗರ ವಾರ್ತಾ ಕಚೇರಿಯ ಉಪ ವಾರ್ತಾಧಿಕಾರಿಯವರಾದ ಶ್ರೀ ಡಿ. ಎಕ್. ಪಾಳೇಗಾರ್ ಮತ್ತು ಅವರ ಕಚೇರಿಯ ಉದ್ಯೋಗಿಗಳು ಮತ್ತು ಪತ್ರಿಕೋದ್ಯೋಗಿಗಳು ಆಗಮಿಸಿದ್ದರು.

ಸಂಘದ ಅಧ್ಯಕ್ಷರಾದ ಶ್ರೀ ಎಂ ಎಕ್. ತಿಮ್ಮಯ್ಯನವರು ಸ್ವಾಗತ-ಭಾಷಣಮಾಡಿ, ಪಣ್ಣ ಪತ್ರಿಕೆಗಳಿಗೆ ಸರ್ಕಾರಿಂದ ಜಾಹೀರಾತು ಮುಂತಾದ ವಿಷಯಗಳನ್ನು ತಿಳಿಸಿ ಶ್ರೀ ಡಿ. ಆರ್ ರಾಮಯ್ಯನವರು ಇಲಾಖೆ ಮುಖ್ಯಾಧಿಕಾರಿಯವರಾದ ಬಗ್ಗೆ ಅಭಿನಂದಿಸಿದರು

ವಿಜಯ ಪತ್ರಿಕೆಯ ಸಂಪಾದಕರಾದ ಶ್ರೀ ಎ. ರಾಮಣ್ಣನವರು, ಸಾಧ್ವಿ ಪತ್ರಿಕೆಯ ಮಾಲೀಕರಾದ ಶ್ರೀ ಅಗರಂ ರಂಗಯ್ಯನವರು ಮತ್ತ ಮೈಸೂರು ಪತ್ರಿಕೆ ಸಂಪಾದಕರಾದ ಶ್ರೀ ತಿರುಮಕೂಡಲು ನಾರಾಯಣರು ವಾರ್ತಾ ಇಲಾಖೆಯ ಮುಖ್ಯಾಧಿಕಾರಿಯವರ ದಕ್ಷತೆ, ಅವರ ಪ್ರಾಂಡಿತ್ಯಗಳ ಬಗ್ಗೆ ಪ್ರಶಂಸಿಸಿ ಅಭಿನಂದಿಸಿದರು ಪಣ್ಣ ಪತ್ರಿಕೆಗಳಿಗೆ ಜಾಹೀರಾತು ಕೊಡಬೇಕಾದ್ದು ಮೈಸೂರು ನಗರದ ವಾರ್ತಾ ಇಲಾಖೆ ಪುನರ್ವ್ಯವಸ್ಥೆ ಅಗತ್ಯ ಕುರಿತು ಅವರು ತಮ್ಮ ಭಾಷಣದಲ್ಲಿ ತಿಳಿಸಿದರು.

ವಾರ್ತಾ ಇಲಾಖೆಯ ಮುಖ್ಯಾಧಿಕಾರಿಯವರಾದ ಶ್ರೀ ಡಿ ಆರ್. ರಾಮಯ್ಯನವರು ತಮಗಿತ್ತ ಸತ್ಕಾರಕೂಟದ ಬಗ್ಗೆ ತಮ್ಮ ಕವಿತಾ ವಾಣಿಯಿಂದ ವರ್ಣಿಸಿ ಭಾಷಣ ಮಾಡುತ್ತಾ, ವಾರ್ತಾ ಇಲಾಖೆಯನ್ನು ಅಭಿವೃದ್ಧಿ ಮಾಡಬೇಕೆಂಬ ಆಸೆ ನನಗಿದೆ ವಾರ್ತಾ ಇಲಾಖೆ ಇದೆ ಎಂಬುದು ಎಲ್ಲಾ ಜನರಿಗೂ ಗೊತ್ತಾಗಬೇಕು, ಅದಕ್ಕಾಗಿ ನಾನು ಶ್ರಮಿಸುವೆ ಜಾಹೀರಾತಿನ ವಿಷಯದಲ್ಲಿ ಮಾರ್ಚ್ ತಿಂಗಳಿನಲ್ಲಿ ವ್ಯವಸ್ಥೆ ಆಗುವುದು, ನೀವೇನೂ ಯೋಚಿಸಬೇಕಿಲ್ಲ' ಮೈಸೂರು ನಗರದ ಪತ್ರಿಕೆಗಳಿಗೆ ಪ್ರಧಾನ ಸುದ್ದಿಗಳನ್ನು ಅಂದೇ ಒದಗಿಸುವ ವ್ಯವಸ್ಥೆ ಮಾಡ ತ್ತೇನೆ ಎಂದರು

ಸಂಘದ ಉಪಾಧ್ಯಕ್ಷರಾದ ಶ್ರೀ ಬಿ ಬಾಲಯ್ಯನವರು ವಂದನಾರ್ಪಣೆ ಮಾಡಿದರು.

---

24 ನೆಯ ತಾ|| ಮಧ್ಯಾಹ್ನ 2-30 ಗಂಟೆಗೆ ಗ್ರಾಮ ವಿದ್ಯೋದಯ ಸಂಘದ ಆಶ್ರಯದಲ್ಲಿ ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಪೋಷಕರ ಮತ್ತು ಮಾತಾ ಪಿತೃಗಳ ಸಭೆಯಲ್ಲಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ|| ನಿ|| ಪ್ರ|| ಶ್ರೀ ಶಿವಕುಮಾರ ಸ್ವಾಮಿಗಳು ಭಾಷಣಮಾಡುವರು ತಿ. ನರಸೀಪುರ ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ 25 ನೇ ತಾ|| ಮಧ್ಯಾಹ್ನ 2-30 ಗಂಟೆಗೆ ವಿದ್ಯೋದಯ ಶಿಕ್ಷಣ ಸಂಸ್ಥೆಗಳ ವಾರ್ಷಿಕೋತ್ಸವ ಶಿಕ್ಷಣ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಅಧ್ಯಕ್ಷತೆ ವಹಿಸುವರು. ವಿಧಾನ ಸಭೆ ಸದಸ್ಯರಾದ ಶ್ರೀ ಜೆ. ಬಿ ಮಲ್ಲಾರಾಧ್ಯರು ಉಪದೇಶ ಭಾಷಣ ಮತ್ತ ಬಹುಮಾನ ವಿತರಣೆ ಮಾಡುವರು.

ವುಡ್‌ಲ್ಯಾಂಡ್ಸ್ ಜನಪ್ರಿಯ 2 ನೇ ವಾರ

ದೇವಾನಂದ — ಕಲ್ಪನಾ ಕಾರ್ತಿಕ್ — ಶಶಿಕಲಾ ಪಾತ್ರವಹಿಸಿರುವ

ನೌದೊಗಾರ = Nau Do Gyara

ಅತ್ಯನೋಘ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ಅಪೆರಾ— ಯಶಸ್ವಿ 5 ನೇ ವಾರ

ಮಾಯಾಬಜಾರ್

ಎಕ್. ಟಿ. ರಾವ್‌ರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಲೀಲಾಂಗಿ ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 19-1-58 ರಿಂದ

ಕೋಟೀಶ್ವರನ್ (ತಮಿಳು)

ಪಾತ್ರ— ಶಿವಾಜಿ ಗಣೇಶ್, ಪದ್ಮಿನಿ ರಾಗಿಣಿ, ತಂಗವೇಲು, ಶ್ರೀ ರಾಂ

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಬೆಳಿಗಿನ ಪ್ರದರ್ಶನ 10-30 ಕ್ಕೆ

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ.

ಹಂಗೇರಿಯ ವಿಷಯದಲ್ಲಿ ವಿಶ್ವಸಂಸ್ಥೆ ವಂದಿಸಿದ ಸಂಬಂಧದ ಚಿತ್ರ

Edited, Printed& Published by Dharma Prachara Krishna Rao, at the Satyavadi Press Chamundipuram Mysore.